

# ಕವಿಮನದ ಅಂಕಿತಾ

**'ಅಬಜಬದಬ' ಸಿನಿಮಾ ಮೂಲಕ ಹಿರಿತೆರೆ ಪ್ರವೇಶಿಸಿದ್ದ ಅಂಕಿತಾ ಅಮರ್, ಈಗ ರಕ್ಷಿತ್ ಶೆಟ್ಟಿ ನಿರ್ಮಾಣದ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ ಮೂಲಕ ಕವಿಯಾಗಲು ಹೊರಟಿದ್ದಾರೆ.**

■ ಪದ್ಮನಾಭ ಭಟ್

"ನಮ್ಮನೆ ಯುವರಾಣಿ' ಧಾರಾವಾಹಿಯಲ್ಲಿ ಮೀರಾ ಆಗಿ ನಟಿಸದೇ ಇದ್ದಿದ್ದರೆ ನಾನು ಹಾಡುಗಾರ್ತಿ ಅಂತ ಯಾರಿಗೂ ಗೊತ್ತಾಗ್ತಿರ್ಲಿಲ್ಲ; 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮಕ್ಕೆ ನಿರೂಪಕಿಯಾಗಲೂ ಸಾಧ್ಯವಾಗುತ್ತಿರಲಿಲ್ಲ. 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದ ನಿರೂಪಕಿ ಆಗದಿದ್ದರೆ ನನ್ನಲ್ಲಿನ ಮಾತುಗಾರ್ತಿ ಜಗತ್ತಿಗೆ ಕಾಣಿಸುತ್ತಿರಲಿಲ್ಲ; ಸಿನಿಮಾರಂಗದಿಂದ ಅವಕಾಶಗಳೂ ಬರುತ್ತಿರಲಿಲ್ಲ. ಹಾಗಾಗಿ ಇವತ್ತು ನಾನು ಎಲ್ಲಿ ನಿಂತಿದ್ದೇನೋ ಅಲ್ಲಿಗೆ ಬಂದ ಒಂದೊಂದು ಮೆಟ್ಟಿಲುಗಳೂ ಅಷ್ಟೇ ಮುಖ್ಯ. ಇದಕ್ಕಾಗಿ 'ಕಲರ್ಸ್' ವಾಹಿನಿಗೆ ಧನ್ಯವಾದ ಹೇಳಬೇಕು" ಎಂದು ತುಸು ಭಾವುಕವಾಗಿಯೇ ಮಾತಿಗಿಳಿದರು ಅಂಕಿತಾ ಅಮರ್.

ಮಯೂರ ರಾಘವೇಂದ್ರ ಅವರ ನಿರ್ದೇಶನದಲ್ಲಿ 'ಅಬಜಬದಬ' ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿರುವ ಅಂಕಿತಾ ಈಗ 'ಇಬ್ಬನಿ ತಬ್ಬಿದ ಇಳೆಯಲಿ' ಕಾವ್ಯಕಟ್ಟಲು ಹೊರಟಿದ್ದಾರೆ. 'ಇಬ್ಬನಿ ತಬ್ಬಿದ ಇಳೆಯಲಿ' ಅವರ ಎರಡನೇ ಸಿನಿಮಾ. ಈ ಸಿನಿಮಾದಲ್ಲಿ ಅವರು ಕವಯಿತ್ರಿಯಾಗಿ ಕಾಣಿಸಿಕೊಳ್ಳುತ್ತಿದ್ದಾರಂತೆ. ಈ ಚಿತ್ರದ ಕುರಿತು ತುಂಬ ಉತ್ಸಾಹದಿಂದ ಮಾತಾಡುವ ಅವರು 'ಇದು ನಾವೆಲ್ಲರೂ ಹೆಗಲೆಣೆಯಾಗಿ ನಿಂತು ಕಾಣುತ್ತಿರುವ ಒಂದು ಚಂದದ ಕನಸು' ಎಂದು ಕಾವ್ಯಾತ್ಮಕವಾಗಿಯೇ ಬಣ್ಣಿಸುತ್ತಾರೆ.

'ಕಿರಿಕ್ ಪಾರ್ಟಿ' ಮತ್ತು 'ಇವನೇ ಶ್ರೀಮನ್ನಾರಾಯಣ' ಸಿನಿಮಾಗಳಿಗೆ ಬರಹಗಾರನಾಗಿ, ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದ ಚಂದ್ರಜಿತ್ ಬೆಳ್ಳಿಯಪ್ಪ ಅವರು 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾವನ್ನು ನಿರ್ದೇಶಿಸುತ್ತಿದ್ದಾರೆ.

ಈ ರೊಮ್ಯಾಂಟಿಕ್ ಡ್ರಾಮಾದಲ್ಲಿ ಅಂಕಿತಾ ಅವರ